ಎಂ ವಿ ಸಿ. ನಂ. 289/2022 ಪಿಡಬ್ಲೂಃ 1

ದಿನಾಂಕಃ 27-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿಃ ಶ್ರೀ ವಾಯ್ ವಿ ಎಸ್ ವಕೀಲರಿಂದಃ**

3. ಮನೆಯಲ್ಲಿ ನಾನು , ನನ್ನ ಹೆಂಡತಿ , ನನ್ನ ತಂದೆ ,ತಾಯಿ , ನನ್ನ ತಮ್ಮ , ತಮ್ಮನ ಹೆಂಡತಿ ಇದ್ದೇವೆ . ನನ್ನ ತಮ್ಮ ಬೋಟಿಂಗ ಕೆಲಸ ಮಾಡುತ್ತಾರೆ . ತಂದೆ ಮನೆಯಲ್ಲೇ ಇದ್ದಾರೆ , ಏನು ಕೆಲಸ ಮಾಡುವುದಿಲ್ಲ . ನಾನು ಈಗ ಬೆಂಗಳೂರಿನಲ್ಲಿ ಇದ್ದೇನೆ . ನಾನು ಸುಪರ್ ಮಾರ್ಕೆಟ್ ನಲ್ಲಿ ಕೆಲಸ ಮಾಡುತ್ತಿದ್ದೇನೆ . ನಾನು ಎರಡು ವರ್ಷಗಳಿಂದ ಪ್ರವೀಣರವರ ಗಾಡಿಯಲ್ಲಿ ಕ್ಲಿನರ್ ಆಗಿ ಕೆಲಸ ಮಾಡುತ್ತಿದ್ದೆ. 1 ನೇ ಎದುರುದಾರರ ಊರು ಎತ್ತಿನಬೈಲ್ ಎಂದರೆ ಸರಿ . ಮಹಾರಾಷ್ಟ್ರದಿಂದ ಮಾಲನ್ನು ತಂದು ಮಂಗಳೂರಿಗೆ ತಲುಪಿಸುತ್ತಿದ್ದೆವು , ಮಂಗಳೂರಿನಿಂದ ಮಾಲು ತೆಗೆದುಕೊಂಡು ಹೋಗಿ ಮಹಾರಾಷ್ಟ್ರಕ್ಕೆ ತಲುಪಿಸುತ್ತಿದ್ದೆವು . ಆ ದಿನ ನಾವು ಸಾಂಗಲಿಯಿಂದ ಮಂಗಳೂರಿಗೆ ಹೋಗುತ್ತಿದ್ದೆವು. ಅಪಘಾತ ಪಡಿಸಿದ ಸ್ಥಳದಿಂದ ಎತ್ತಿನಬೈಲ್ ಒಂದು ಕಿಲೋ ಮೀಟರ್ ಒಳಗಡೆ ಆಗುತ್ತದೆ . ಆ ದಿನ ವಾಹನದಲ್ಲಿ ಪಶು ಆಹಾರ ಸಾಗಿಸುತ್ತಿದ್ದೆವು. ಆ ದಿನ ಲೋಡನ್ನು ಭಟ್ಕಳದಲ್ಲಿ ಖಾಲಿ ಮಾಡಿದೆವು. ನಾನು ಅವರ ಜೊತೆ ಹೋಗಲಿಲ್ಲ. ವಾಹನದ ಮಾಲೀಕರೇ ಗಾಡಿಯನ್ನು ತೆಗೆದುಕೊಂಡು ಹೋದರು . ವಾಹನದ ಮಾಲೀಕರೇ ವಾಹನವನ್ನು ಓಡಿಸುತ್ತಿದ್ದರು . ಡ್ರೈವರ್ ಇರಲಿಲ್ಲ. ವಾಶ್ ರೂಮ್ ಗೆ ಎಂದು ಗಾಡಿ ನಿಲ್ಲಿಸಿದ್ದೆವು . ನಾವು ಉತ್ತರ ಕಡೆಯಿಂದ ಬಂದು ದಕ್ಷಿಣದ ಕಡೆಗೆ ಹೋಗುತ್ತಿದ್ದೆವು. ಅಂಕೋಲಾ ಕಡೆಯಿಂದ ಕುಮಟಾ ಕಡೆಗೆ ಹೋಗುತ್ತಿದ್ದೆವು . ಸದರಿ ರಸ್ತೆ ಚತುಷ್ಪಥ ರಸ್ತೆ ಎಂದರೆ ಸರಿ . ವಾಹನವನ್ನು ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿದ್ದೆವು. ನಾವು ಹೋಗುವ ದಾರಿಯ ರಸ್ತೆಯ ಪಕ್ಕದಲ್ಲಿ ಎಡಗಡೆ ನಿಲ್ಲಿಸಿದ್ದೆವು . ರಸ್ತೆ ಬದಿಗೆ ಚರಂಡಿ ಇರಲಿಲ್ಲ . ರೋಡ್ ಸೈಡಿಗೆ ಗಾಡಿ ನಿಲ್ಲಿಸಿದ್ದೆವು. ಹೈವೆ ಸೈಡ್ ನಲ್ಲಿ ಸ್ವಲ್ಪ ಮಣ್ಣಿನ ರಸ್ತೆಯಲ್ಲಿ ಗಾಡಿ ನಿಲ್ಲಿಸಿದ್ದೆವು . ನಾನು ಹಾಗೂ ಡ್ರೈವರ್ ಇಬ್ಬರು ನೇಚರ್ಫಾಲ್ ಗೆ ಇಳಿದಿದ್ದೆವು . ಆಗ ಸಮಯ ರಾತ್ರಿ 8-15 ರಿಂದ 8-45 ಆಗಿತ್ತು . 20 ನಿಮೀಷ ಲಾರಿಯಿಂದ ಕೆಳಗಡೆ ಇದ್ದೆವು . ಡ್ರೈವರ್ ಕೂಡ 20 ನಿಮೀಷ ಗಾಡಿಯಿಂದ ಕೆಳಗೆ ಇದ್ದೆವು. ಅಲ್ಲಿ ಅಂಗಡಿ, ಮನೆ ಯಾವುದು ಇಲ್ಲ. ನಾನು ಗಾಡಿ

ಹತ್ತುವಾಗ ಡ್ರೈವರ್ ಸಡನ್ ಆಗಿ ಗಾಡಿ ಮೂವ್ ಮಾಡಿದರು . ಕಚ್ಚಾ ರಸ್ತೆಯಿಂದ ಹೈವೆ ರಸ್ತೆಗೆ ಗಾಡಿ ತೆಗೆದುಕೊಳ್ಳಬೇಕೆಂದರೆ ಗಾಡಿಯನ್ನು ಬಲಗಡೆಗೆ ತೆಗೆದುಕೊಂಡು ಮುಂದಕ್ಕೆ ಹೋಗಬೇಕು ಎಂದರೆ ಸರಿ . ನಾನು ಒಂದು ಕಾಲು ಮೇಲೆ ಇಟ್ಟಿದ್ದೆ , ಇನ್ನೂ ಕೈಯಲ್ಲಿ ಹ್ಯಾಂಡಲ್ ಹಿಡಿದಿರಲಿಲ್ಲ , ಅಷ್ಟರಲ್ಲಿ ಡ್ರೈವರ್ ಗಾಡಿ ಮೂವ್ ಮಾಡಿದರು. ನಾನು ಅಲ್ಲೇ ಪಕ್ಕದಲ್ಲೇ ಬಿದ್ದೆ . ಅವರು ಗಾಡಿ ಮೂವ್ ಮಾಡಿದ ತಕ್ಷಣ ನಾನು ಬಿದ್ದೆ . ಗಾಡಿಯ ಹತ್ತಿರ ಬಿದ್ದೆ . ನಾನು ಮುಂದಿನ ಟಯರ್ ನ ಪಕ್ಕದಲ್ಲಿ ಬಿದ್ದೆ . ಸದರಿ ಲಾರಿ 14 ಚಕ್ರದ ವಾಹನ. ವಾಹನ ಅಂದಾಜು ಉದ್ದ ಅಗಲ ಹೇಳಲು ಬರುವುದಿಲ್ಲ . ಲಾರಿಯ ಹಿಂದಿನ ಗಾಲಿ ನನ್ನ ಬಲಗಾಲಿನ ಮೇಲೆ ಹತ್ತಿ ಇಳಿದಿದೆ , ಎಡಗಾಲಿಗೆ ಸ್ವಲ್ಪ ಟಚ್ ಆಗಿದೆ . ಕಾಲಿನ ಬಲಭಾಗದ ಪಾದದ ಮೇಲೆ ಹತ್ತಿ ಇಳಿದಿದೆ ಹಾಗೂ ಎಡಗಾಲಿಗೆ ಟಚ್ ಆಗಿದೆ . ವಾಹನದಲ್ಲಿ 18-20 ಟನ್ ಸರಕು ಇರಬಹುದು . ಕಾಲಿಗೆ ರಕ್ತ ಬಂದಿತ್ತು . ಜಾಗದಲ್ಲಿ ರಕ್ತ ಬಿದ್ದಿತ್ತು . ಎಡಗಾಲಿಗೆ ಫ್ರಾಕ್ಚರ್ ಆಗಿತ್ತು . ದೇಹದ ಉಳಿದ ಭಾಗಕ್ಕೆ ಏನು ಪೆಟ್ಟಾಗಲಿಲ್ಲ. ನಾನು ಜೋರಾಗಿ ಕೂಗಿಕೊಂಡೆ . ಆಗ ಡ್ರೈವರ್ ಗಾಡಿ ನಿಲ್ಲಿಸಿ ಬಂದರು. ನಂತರ ನನಗೆ ಜ್ಞಾನ ತಪ್ಪಿತ್ತು .

4. ಅಪಘಾತದ ನಂತರ ನನ್ನನ್ನು ಎಲ್ಲಿಗೆ ತೆಗೆದುಕೊಂಡು ಹೋದರು ಗೊತ್ತಿಲ್ಲ . ಜಾಗದಲ್ಲಿ ಯಾರು ಯಾರು ಬಂದಿದ್ದರು ಗೊತ್ತಿಲ್ಲ ಆದರೆ ಪ್ರವೀಣರವರು ನನ್ನನ್ನು ಕಾರವಾರದ ಆಸ್ಪತ್ರೆಗೆ ಸೇರಿಸಿದ್ದರು . ಮಾರನೇಯ ದಿನ ಮಧ್ಯಾಹ್ನ 1 ಗಂಟೆಗೆ ಕಾರವಾರದ ಸರ್ಕಾರಿ ಆಸ್ಪತ್ರೆಗೆ ಮುಟ್ಟಿರುತ್ತೇವೆ . ಕಾರ ನಲ್ಲಿ ಕಾರವಾರಗೆ ತೆಗೆದುಕೊಂಡು ಹೋಗಿದ್ದರು . ನಾನು ಹೇಳುವ ಅಪಘಾತ ಸ್ಥಳದಿಂದ ಕಾರವಾರ 55 ರಿಂದ 60 ಕಿಲೋ ಮೀಟರ್ ಆಗುತ್ತದೆ . ನನ್ನನ್ನು ಎಮರೆನ್ಸಿ ತೆಗೆದುಕೊಂಡು ಪರೀಕ್ಷೆ ಮಾಡಿದರು . ಆಗ ನನ್ನ ಜೊತೆ ನನ್ನ ತಾಯಿ, 1 ನೇ ಎದುರುದಾರರು ಇದ್ದರು . ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಗೊತ್ತಿಲ್ಲ . ವೈದ್ಯರಿಗೆ ಗಾಯ ಹೇಗಾಯಿತು ವಿಷಯ ತಿಳಿಸಿರುತ್ತೇನೆ . ಪೋಲಿಸರು ಕೂಡ ಅಲ್ಲೇ ಇದ್ದರು . ಅವರು ನನ್ನನ್ನು ಮಾತನಾಡಿಸಿದ್ದಾರೆ . ಆ ಸಮಯದಲ್ಲಿ 1 ನೇ ಎದುರುದಾರರು ಕೂಡ ಅಲ್ಲೇ ಇದ್ದರು . ಪೋಲಿಸರು ನನ್ನನ್ನು ಕೇಳಿ ಬರವಣಿಗೆ ಮಾಡಿಕೊಂಡರು . ನನ್ನ ಸಹಿ ಪಡೆದುಕೊಳ್ಳಲಿಲ್ಲ . ಹೊರಗಡೆ ಪ್ರವೀಣರವರನ್ನು ಕೇಳಿರಬಹುದು , ನನಗೆ ಗೊತ್ತಿಲ್ಲ. ನನ್ನ ಮುಂದೆ ಪ್ರವೀಣರವರ ವಿಚಾರಣೆ ಮಾಡಿಲ್ಲ . ಸಂಜೆಯ ಸಮಯದಲ್ಲಿ ನನ್ನ ತಂದೆ ಕೂಡ ಆಸ್ಪತ್ರೆಗೆ ಬಂದರು. ನನ್ನ ಜೊತೆ ಆಸ್ಪತ್ರೆಯಲ್ಲಿ ತಾಯಿ ಮಾತ್ರ

ಇದ್ದರು . ಅದೇ ದಿನ ನನ್ನ ತಂದೆ ಹೋದರು . ಆಸ್ಪತ್ರೆಗೆ ಹೋಗಿ ಬಂದು ಮಾಡುತ್ತಿದ್ದರು . ಕಾರವಾರ ಆಸ್ಪತ್ರೆಯಲ್ಲಿ 17 ದಿವಸ ಇದ್ದೆ. ದಿಃ 13-09-2021 ರಂದು ಬೆಳಿಗ್ಗೆ ಆಸ್ಪತ್ರೆಯಿಂದ ಡಿಸ್ಚಾರ್ಜ ಹೊಂದಿರುತ್ತೇನೆ. ಆ ಸಮಯದಲ್ಲಿ ನನ್ನ ತಾಯಿ ಮತ್ತು ನನ್ನ ಹೆಂಡತಿ ಅಣ್ಣ ಡಿಸ್ಚಾರ್ಜ ಮಾಡಿಕೊಂಡು ಕರೆದುಕೊಂಡು ಬಂದಿದ್ದಾರೆ . ಅದರ ನಂತರ ಒಂದು ವರ್ಷದ ತನಕ ನಾನು ಕಾರವಾರದ ಆಸ್ಪತ್ರೆಗೆ ಹೋಗಿ ಬರುತ್ತಾ ಇದ್ದೆ. ಅದರ ಮಧ್ಯದಲ್ಲಿ ಕುಮಟಾದಲ್ಲಿ ಎರಡು ಬಾರಿ ಚಿಕಿತ್ಸೆ ಪಡೆದಿರುತ್ತೇನೆ.

5. ಪ್ರಥಮ ಬಾರಿ ಕಾರವಾರದ ಆಸ್ಪತೆರಗೆ ನನ್ನನ್ನು 1 ನೇ ಎದುರುದಾರ ಕಾರಿನಲ್ಲಿ ಕರೆದುಕೂಂಡು ಹೋಗಿದ್ದರು. ನಂತರ ನಮ್ಮೂರಿನ ರಿಜ್ವಾನ್ ರವರ ಕಾರಿನಲ್ಲಿ ಹೋಗಿರುತ್ತೇನೆ. ರಿಜ್ವಾನ್ ಊರಿನವರು. ಸಂಬಂಧಿಕರಲ್ಲ, ನಮ್ಮ ಪಂಥದವರು . ವಾಹನದ ಮಾಲೀಕರು ರಿಜ್ವಾನ್ ರವರೇ ಆಗಿರುತ್ತಾರೆ . ಸದರಿ ವಾಹನ ಟ್ಯಾಕ್ಸಿ ಆಗಿರುತ್ತದೆ . ನಾನು ಹೇಳಿದಂತೆ ರಿಜ್ವಾನ್ ರವರು ಚಿಕಿತ್ಸೆಗಾಗಿ ನನ್ನನ್ನು ಅವರ ವಾಹನದಲ್ಲಿ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನಿಪಿ-33 ರಿಂದ ನಿಪಿ-37 ರಸೀದಿಗಳಲ್ಲಿ ನಮೂದಿಸಿದ ವಾಹನ ಸಂಖ್ಯೆ ಕೆಎ 47/ಎಮ್ 8050 ಈ ವಾಹನ ಅವರಿಗೆ ಸಂಬಂಧಪಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ . ನಾನು ಪರಿಹಾರ ಪಡೆಯುವ ಸಲುವಾಗಿ ಈ ದಾಖಲಾತಿಗಳನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ 2 ನೇ ಎದುರುದಾರ ಪರ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.